# ವಿಪರ್ಯಾಸಗಳ ಅರಿವು

ವಿಜ್ಞಾನ ಮುಂದೆ ನೋಡುತ್ತಿದೆ ನಿಜ. ವಿಜ್ಞಾನ, ಸಾಹಸದ ಮನೋಧರ್ಮವನ್ನು ಹೊಂದಿದೆ ನಿಜ. ವಿಜ್ಞಾನವು ವೇಗವಾಗಿ ಧಾವಿಸಲು, ಧಾವಿಸುತ್ತಿದ್ದಂತೆ ವೇಗವನ್ನು ಹೆಚ್ಚಿಸಿಕೊಳ್ಳಲು ಬಯಸುತ್ತಿದೆ ನಿಜ. ವಿಜ್ಞಾನದ ಈ ಗುಣಗಳೆಲ್ಲವೂ ಇಂದಿನ ಆಧುನಿಕ ನಾಗರಿಕ ಬದುಕಿನಲ್ಲಿ ಅವಶ್ಯವೆಂದೇ ಮುಖ್ಯ ಎಂದೇ ನಂಬಿಸಲ್ಪಟ್ಟವೆ. ಆದರೆ ತನ್ನ ಧಾವಂತದಲ್ಲಿ, ಸುತ್ತಮುತ್ತ ನೋಡುತ್ತ ಸಾಗುವ ವ್ಯವಧಾನವೇ ಇಲ್ಲವಾಗಿದೆ– ವಿಜ್ಞಾನಕ್ಕೆ. ತನ್ನ ವೇಗಕ್ಕೂ, ಸುತ್ತಲಿನ ಬದುಕು ಸಾಗುತ್ತಿರುವ ವೇಗಕ್ಕೂ ಸಂಬಂಧ ತಪ್ಪಿಹೋಗುತ್ತಿರುವುದನ್ನು ತಿಳಿಯುವ ಬಿಡುವೇ ವಿಜ್ಞಾನಕ್ಕೆ ಸಿಗುತ್ತಿಲ್ಲ. ವಾಹನವೊಂದರಲ್ಲಿ ವೇಗವಾಗಿ ಸಾಗುವಾಗ ಸುತ್ತಲಿನ ಪರಿಸರ ಹಿಂದಕ್ಕೋಡುತ್ತಿರುವಂತೆ ಭಾಸವಾಗುತ್ತದೆಯಲ್ಲ! ಪರಿಸರವನ್ನು ಹಿಂದಿಕ್ಕಿ ಸಾಗುವುದೇ ವೇಗದ ಸ್ವಭಾವ ಎಂಬ ಭ್ರಾಂತಿಯೂ ಉಂಟಾಗುತ್ತದೆಯಲ್ಲ! ಆದರೆ ನಿಜಕ್ಕಾದರೂ ಪರಿಸರವನ್ನು ಹಿಂದಿಕ್ಕುವುದು ಎಂದು ಉಂಟೆ? ಸಾಧ್ಯವೆ? ಒಂದೊಮ್ಮೆ, ಸಾಧ್ಯವೆಂದು ವಾದಕ್ಕಾಗಿ ಒಪ್ಪಿದರೂ, ಅದು ದುರಂತವಾಗಲಾರದೆ? ಯಾಕೆ ಸಾಧ್ಯವಾಗಬೇಕು? ಇಂಥ ಪ್ರಶ್ನೆಗಳನ್ನು ವಿಜ್ಞಾನ ಕೇಳಿಕೊಳ್ಳುತ್ತಿಲ್ಲ. ವಿಜ್ಞಾನವೆನ್ನುವುದು ಜ್ಞಾನ ಶಾಖೆಯಾದರೂ, 'ಜ್ಞಾನ'ದ ಸ್ವಭಾವವೇ ಆಗಿರುವ ಸ್ವ–ಅವಲೋಕನದ ಗುಣದಿಂದ ವಿಜ್ಞಾನ ದೂರ ಸರಿಯುತ್ತಿದೆ. ಬಂಡವಾಳಶಾಹಿಗಳ ಮುದ್ದಿನ ಕೂಸಾಗಿ ಬೆಳೆಯುತ್ತಿರುವ, ಮಾರುಕಟ್ಟೆ ಕೇಂದ್ರಿತವಾಗಿ ತನ್ನ ಕೊಳ್ಳಲ್ಪಡುವ ಗುಣವೇ ತನ್ನ ನಿಜವಾದ ಮುಖ ಎಂದು ತಾನೇ ನಂಬಿದಂತಿರುವ, ಜಾಹೀರಾತುಗಳೇ ತನ್ನ ಆತ್ಮ ಪ್ರಮಾಣ ಪತ್ರವಾಗಿರುವ ವಿಜ್ಞಾನವು ನಿಜವಾಗಿ ಜ್ಞಾನವೋ–ಕರ್ಮವೋ ಎಂದೇ ತಿಳಿಯುತ್ತಿಲ್ಲ! ಅಂದರೆ ಮುಖ್ಯವಾಗಿ ವಿಪರ್ಯಾಸಗಳ ಅರಿವು; ವಿರೋಧಾಭಾಸಗಳ ಅರಿವು; ತನ್ನ ಸಾಧನೆಯನ್ನು ನಿಸರ್ಗ ಯಾವ ರೀತಿ ತೆಗೆದುಕೊಳ್ಳುತ್ತಿದೆ, ನಿಸರ್ಗದ ಪ್ರತಿಸ್ಪಂದನವೇನು ಎಂದು ಅವಲೋಕಿಸುವ ಅರಿವು ವಿಜ್ಞಾನಕ್ಕೆ ಅದರ ವೇಗವನ್ನು ಸಾಧಿಸಬೇಕೆನ್ನುವ ಹುಚ್ಚಿನಿಂದಾಗಿಯೇ– ದೂರವಾಗುತ್ತಿದೆ.

ಆಧುನಿಕ ಕೃಷಿಯ ವಿಪರ್ಯಾಸಗಳನ್ನು ಕುರಿತು, ವಿನಿನ್ ಪೇರೀರಾ (Winin Pereira) ಬರೆದಿರುವುದನ್ನು ನೋಡಿ. ಪೇರೀರಾ, ಮೂಲತಃ ನ್ಯೂಕ್ಲಿಯರ್ ವಿಜ್ಞಾನ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದವರು. ಒಂದು ದಿನ ಅದನ್ನು ತೊರೆದು ಹೊಸ ಹಾದಿ ಹಿಡಿಯಲೆಂದು ಹೊರ ಬಂದವರು. ವಿಶಿಷ್ಟ ಬೌದ್ಧಿಕ ಬದುಕಿಗಿಂತ, ಸಹಜ ನೈಸರ್ಗಿಕ ಬದುಕಿಗೆ ಒಲಿದವರು. ಬರವಣಿಗೆಯಲ್ಲಿ ತರ್ಕಬದ್ಧತೆಯ, ಕಾರ್ಯ– ಕಾರಣ ಸಂಬಂಧಾತ್ಮಕತೆಯ ಜೊತೆಗೆ ನಿಸರ್ಗವು ಸ್ಪಂದಿಸುವ ಬಗೆ ಬಗೆಗಳನ್ನೂ ದಾಖಲಿಸಿದವರು. ಇವರು ಪಶ್ಚಿಮದ ಆಧುನಿಕ ಕೃಷಿಯನ್ನು ಅದರಲ್ಲಡಗಿರುವ ವಿಪರ್ಯಾಸಗಳನ್ನು ಕುರಿತು ಹೀಗೆ ಬರೆದಿದ್ದಾರೆ.

ಅಮೆರಿಕಾದಲ್ಲಿ ಕೃಷಿ– ಕ್ಷೇತ್ರಗಳು, ಹೊಲ– ಗದ್ದೆಗಳು ಬಹು ವಿಶಾಲವಾಗಿವೆ. ನಾವು ಊಹಿಸಲಿಕ್ಕೂ ಸಾಧ್ಯವಾಗದಷ್ಟು ವಿಸ್ತಾರವಾಗಿ ಹರಡಿವೆ. ಇವು ಖಾಸಗೀ ಜಮೀನುಗಳು. ಸ್ಥಳೀಯ ದೇಸೀ ರೆಡ್– ಇಂಡಿಯನ್ ಜನಾಂಗವನ್ನು ಪೂರ್ಣವಾಗಿ ನಾಶಮಾಡಿ ಈ ವಿಸ್ತಾರವಾದ ಬಯಲು ಭೂಮಿ ಬಳಿಯ ಜನರಿಗೆ ಸಿಕ್ಕಿತ್ತು ದಕ್ಕಿತ್ತು. ಭೂಮಿಯ ಈ ವಿಸ್ತಾರವೇ ಕೃಷಿಯನ್ನು ಯಾಂತ್ರೀಕರಣಗೊಳಿಸಲು ಮೂಲ ಪ್ರೇರಣೆಯಾಯಿತು. ಈ ಅಗತ್ಯಕ್ಕೆ ಅನುಗುಣವಾಗಿ ಯಂತ್ರಗಳು ರೂಪುಗೊಂಡವು. ಯಂತ್ರಗಳಿಗೆ ಇಂಧನಗಳು ಅನಿವಾರ್ಯ ಆಯಿತು. ಅದಕ್ಕಾಗಿ ಪೆಟ್ರೋಲ್; ಡೀಸಲ್‌ಗಳು ಬಳಕೆಯಾದುವು. ಈ ತೈಲಗಳು ಬಳಸಿದಂತೆ ಖಾಲಿಯಾಗುವ ತೈಲಗಳು, ಮರು ಉತ್ಪತ್ತಿಯಾಗುವಂಥದಲ್ಲ ಎಂಬ ಅಂಶವು ಗಮನಿಸಲ್ಪಡಲಿಲ್ಲ. ಯಂತ್ರಗಳ ಮೂಲಕ ಕೃಷಿಯನ್ನು ಆಗು ಮಾಡಿಸುವಲ್ಲಿ ಯಂತ್ರಾನುಕೂಲಿಯಾದ ಏಕ ಬೆಳೆಯನ್ನು ಬೆಳೆಯಬೇಕಾಯಿತು. ಇದು ಬೆಳೆ–ವೈವಿಧ್ಯವನ್ನು ನಾಶ ಮಾಡಿತು ಮಾತ್ರವಲ್ಲ ಬೆಳೆ–ವೈವಿಧ್ಯವು ನಿಸರ್ಗದ ಶ್ರೀಮಂತಿಕೆಯನ್ನು ತೋರಿಸುತ್ತದೆ ಎಂಬ ಅಂಶವನ್ನೇ ನಮ್ಮ ಪ್ರಜ್ಞೆಯಿಂದ ಮರೆಮಾಚಿತು. ಇಂಧನದ ಕಾರಣದಿಂದಾಗಿ ಯಂತ್ರಗಳನ್ನು ದುಡಿಸುವುದು ಹೆಚ್ಚು ವೆಚ್ಚದಾಯಕವಾಗಿ ಪರಿಣಮಿಸಲಾಗಿ, ಅಧಿಕ ಉತ್ಪಾದನೆ ಮಾಡತಕ್ಕ ತಳಿಗಳ ಸಂಶೋಧನೆಯತ್ತ ಕೃಷಿ ಸಂಶೋಧನೆ ಹೊರಳಬೇಕಾಯಿತು.

ಇದು ಜೀವ–ಜಗತ್ತಿನ ನೈಸರ್ಗಿಕ ವೈವಿಧ್ಯಕ್ಕೆ ಮತ್ತೆ ಮಾರಕವಾಯಿತು. ಈ ಅಧಿಕ ಉತ್ಪಾದಕ ತಳಿಗಳಾದರೋ ಕೀಟಬಾಧೆ–ರೋಗ ಬಾಧೆಗಳಿಗೆ ಸುಲಭವಾಗಿ ತುತ್ತಾದವು. ಇದರ ನಿವಾರಣೆಗಾಗಿ ಕೀಟನಾಶಕಗಳೂ ಕ್ರಿಮಿನಾಶಕಗಳೂ ಸಿದ್ಧವಾಗಬೇಕಾಯಿತು. ಈ ಕ್ರಿಮಿನಾಶಕಗಳಿಂದಾಗಿ, ಬೆಳೆಯನ್ನು ತಿನ್ನುವ ಕ್ರಿಮಿಕೀಟಗಳು ಮಾತ್ರವಲ್ಲ ಇತರ ಉಪಕಾರೀ ಕೀಟಗಳೂ ನಾಶವಾದವು. ಇದು ಜೀವ–ಜಗತ್ತಿನಲ್ಲಿ ಇನ್ನಷ್ಟು ಅಸಮತೋಲಕ್ಕೆ ವಿಷಮತೆಗೆ ಕಾರಣವಾಯಿತು. ಇಡಿಯ ನಿಸರ್ಗವೇ ಈ ಎಲ್ಲ ವ್ಯತ್ಯಮಕ್ಕೆ ಕಟುವಾಗಿ ಪ್ರತಿಕ್ರಿಯೆ ನೀಡಿತೆಂಬಂತೆ, ಕ್ರಿಮಿನಾಶಕಗಳ ವಿರುದ್ಧ ಕೀಟಗಳು ತಮ್ಮ ಜೈವಿಕ ಪ್ರತಿರೋಧ ಶಕ್ತಿಯನ್ನು ಬೆಳೆಸಿಕೊಂಡುವು! ಕೊಲ್ಲುವ ವಿಷ ಕೊಲ್ಲದ ವಿಷವಾಗಿ ಪರಿಣಮಿಸಿ ಇನ್ನಷ್ಟು ಉಗ್ರವಾದ ವಿಷಗಳ ಸಂಶೋಧನೆ ಅಗತ್ಯವಾಯಿತು. ಆಹಾರವನ್ನು ಬೆಳೆಯಬೇಕಾದ ಕೃಷಿ ವಿಷವನ್ನು ಸಂಶೋಧಿಸಲು ತೊಡಗಿತು! ಇದೊಂದು ಸವಾಲೆಂದೇ ವಿಜ್ಞಾನವು ಬಗೆಯಿತಲ್ಲದೆ ಇದೊಂದು ವಿಪರ್ಯಾಸವೆಂದು ವಿಜ್ಞಾನಕ್ಕೆ ತಿಳಿಯದೆ ಹೋಯಿತು. ಕೀಟಗಳು ತಮ್ಮ ಪ್ರತಿರೋಧ ಶಕ್ತಿಯನ್ನು ಬೆಳೆಸಿಕೊಂಡಾಗ, ನಿಸರ್ಗವು ಕೀಟನಾಶಕಗಳು ಪರವಿಲ್ಲ, ನಿಸರ್ಗವು ಕೀಟಗಳ ಜೀವಂತಿಕೆಯ ಪರವಾಗಿ ನಿಂತಿದೆ ಎಂದು ವಿಜ್ಞಾನವು ಅರಿಯಬಹುದಿತ್ತು. ಕೀಟನಾಶಕಗಳು ನಿಸರ್ಗ ವಿರೋಧಿಯಾದದ್ದು ಎಂದು ಅರಿಯಬಹುದಿತ್ತು. ಅರಿತು ತನ್ನ ದಾರಿಯನ್ನು ಬದಲಿಸಬೇಕಾದ ಅಗತ್ಯವನ್ನು ಮನಗಾಣಬಹುದಿತ್ತು. ಆದರೆ ಹಾಗಾಗಲಿಲ್ಲ. ವೇಗದಲ್ಲಿ ದಾರಿಯನ್ನು ಬದಲಿಸಲಾಗುವುದಿಲ್ಲ! ನಿಧಾನ ನಡೆಯಲ್ಲಿ ಮಾತ್ರ, ಸುತ್ತಮುತ್ತ ನೋಡುತ್ತ ನಿಸರ್ಗದೊಂದಿಗೆ ಸಂವಾದಿಸುತ್ತ ಸಾಗುವಲ್ಲಿ ಮಾತ್ರ ದಾರಿಯನ್ನು ಬದಲಾಯಿಸಬಲ್ಲ ವಿನಯ ಇರುತ್ತದೆ. ವೇಗದ ನಡೆಯಲ್ಲಿ ಪತನವೂ ಸಂಭ್ರಮಿಸಲ್ಪಡುತ್ತದೆ!

ಇದೆಲ್ಲವೂ ಎಲ್ಲಿಂದ ಶುರುವಾಯಿತು? ವಿಶಾಲವಾದ ಕೃಷಿ ಭೂಮಿ ನಮ್ಮದಾಗಿ ದಕ್ಕುವಲ್ಲಿಂದ ಶುರುವಾಯಿತು. ಒಂದು ಕುಟುಂಬಕ್ಕೆ ನಿರ್ವಹಿಸಲಾಗದಷ್ಟು ದೊಡ್ಡ ಭೂಮಿ ದಕ್ಕುವಲ್ಲಿಂದ ಶುರುವಾಯಿತು. ಅಲ್ಲೇ ಇದೆ ದುರಂತದ ಬೀಜ.

ಈ ಭೂಮಿ ಸಿಕ್ಕಿದ್ದಾದರೂ ಹೇಗೆ? ಅನಾದಿಯಿಂದ ಅಲ್ಲಿ ವಾಸಿಸುತ್ತಿದ್ದ ಜನಾಂಗವನ್ನು ನಾಶ ಮಾಡಿ. ನಾಶದಿಂದ ಶುರುವಾದ ನಾಗರಿಕತೆ ನಾಶದತ್ತಲೇ ಸಾಗುತ್ತಿದೆಯೆ? ತಾನು ಶೋಧಿಸಿದ ವಿಷವು ನಿಸರ್ಗದ ಮುಂದೆ ದುರ್ಬಲವಾಗಿ ಬಿಟ್ಟಿತೆಂದು ತಿಳಿದಾಗ ನಿಸರ್ಗದ ಶಕ್ತಿಗೆ ವಿಜ್ಞಾನವು ಆಶ್ಚರ್ಯಗೊಳ್ಳಬಹುದಿತ್ತು. ಚಕಿತಗೊಳ್ಳುತ್ತಿದ್ದರೆ, ಆ ಕೀಟಗಳಂತೆಯೇ ವಿಜ್ಞಾನವೂ ತನ್ನ ವಿಷವನ್ನು ಮೀರಿ ತಾನೇ ಬೆಳೆಯಬಹುದಿತ್ತು. ಚಕಿತಗೊಳ್ಳುವುದು ವಿಜ್ಞಾನ ವಿರೋಧಿಯಲ್ಲ ಎಂದು ತನ್ನೊಳಗೇ ತಿಳಿಯಬಹುದಿತ್ತು. ಈಗಲಾದರೋ ತನ್ನೊಳಗಿನ ವಿಷಕ್ಕೆ ತಾನೇ ಬಲಿಯಾಗಿರುವಂತಿದೆ!

■ ತೋಷ

## ಮಾತೇ ಮುತ್ತು

★ ರೊಟ್ಟಿಯ ಹಸಿವೆಯನ್ನು ತಣಿಸಬಹುದು. ಆದರೆ ಪ್ರೀತಿಯ ಹಸಿವನ್ನು ತಣಿಸುವುದು ಕಷ್ಟ.

–ಸಂತ ಮದರ್ ತೆರೆಸಾ

★ ಯುದ್ಧದಲ್ಲಿ ಬದುಕಿರುವವರು ಮಾತ್ರ ಸಾಯುವುದಲ್ಲ!

–ಐಸಾಕ್ ಅಸಿಮೊವ್

★ ಬದುಕಿಗೆ ಅರ್ಥವಿಲ್ಲ. ಹಾಗೆಂದೇ ಅದಕ್ಕೊಂದು ಅರ್ಥ ಹುಡುಕಬೇಕು.

–ಹೆನ್ರಿ ಮಿಲ್ಲರ್

★ ನೀವು ನಿಜವಾಗಿ ಅಳುತ್ತಿದ್ದೀರಾ ಎನ್ನುವುದು ಮುಖ್ಯವಲ್ಲ. ಎದುರಿಗೆ ಇರುವ ಪ್ರೇಕ್ಷಕರಿಗೆ ನೀವು ಅಳುತ್ತಿದ್ದೀರಿ ಎಂದು ಅನ್ನಿಸುವುದು ಮುಖ್ಯ.

–ಇಂಗ್ರಿಡ್ ಬರ್ಗ್‌ಮನ್

★ ಬೇರೆಯವನರನ್ನು ಸಂತೋಷಗೊಳಿಸ ಬೇಕೆಂದರೆ ಧ್ಯಾನ ಮಾಡಿ. ನೀವು ಸಂತೋಷದಿಂದ ಇರಬೇಕೆಂದರೂ ಧ್ಯಾನ ಮಾಡಿ.

–ದಲೈ ಲಾಮಾ

★ ಮನುಷ್ಯ ಹುಟ್ಟಿದ್ದು ಜೀವಿಸುವುದಕ್ಕಾಗಿ; ಜೀವನದ ಸಿದ್ಧತೆಗಳನ್ನು ಮಾಡಿಕೊಳ್ಳಲು ಅಲ್ಲ.

–ಬೋರಿಸ್ ಪಾಸ್ಟರ್‌ನಾಕ್

★ ಜೀವನವೆಂದರೆ ವಿದೇಶೀ ಭಾಷೆ ಇದ್ದ ಹಾಗೆ. ಎಲ್ಲರೂ ಅದನ್ನು ತಪ್ಪಾಗಿ ಉಚ್ಚರಿಸುತ್ತಾರೆ.

–ಕ್ರಿಸ್ಟೋಫರ್ ಮಾರ್ಲೆ

★ ಪರೀಕ್ಷೆ ಮಾಡದ ಬದುಕು, ಬದುಕಲು ಅರ್ಹವಲ್ಲ.

–ಸಾಕ್ರೆಟೀಸ್